ಅದಕ್ಕೆ ನಾವು ಸಿ. ಓ. ಡಿ.ಗೆ ಕಳುಹಿಸಿದ್ದೇವೆ. ಅದರ ಉನ್ನತ ಅಧಿಕಾರಿಗಳಿಂದ ಕೂಡಲೇ ತನಿಖೆ ಮಾಡಲು ಕಳುಹಿಸಿದ್ದೇವೆ. ಒಂದು ವಾರದ ಒಳಗೆ ವರದಿ ತರಿಸಿ ಅಲ್ಲಿ ಯಾರೇ ತಪ್ಪಿತಸ್ಥರು ಇದ್ದರೆ ಅವರ ಮೇಲೆ ಶಿಸ್ತಿನ ಕ್ರಮ ತೆಗೆದುಕೊಳ್ಳುತ್ತೇನೆ.

ಶ್ರೀ ಗೋಪಿನಾಥ ಆರ್ ಸಾಂಡ್ರಾ :- (ಮಾನ್ಯ ವಸತಿ ಸಚಿವರು)

ಸಚಿವರ ಹೇಳಿಕೆ

ವಿಧಾನ ಸಭೆಯ ಮಾನ್ಯ ಅಧ್ಯಕ್ಷರವರೆ,

ವಿಧಾನ ಮಂಡಲದ ರೂಲ್ಸ್ ಆಫ್ ಪ್ರೊಸೀಜರ್ ನಿಯಮ 311 ರ ಪ್ರಕಾರ ಮಾನ್ಯ ಶ್ರೀ ಆರ್.ವಿ.ದೇಶಪಾಂಡೆ, ವಿರೋಧ ಪಕ್ಷದ ನಾಯಕರು ನೋಟೀಸೊಂದನ್ನು ಕೊಟ್ಟು ಗೌರವಾನ್ವಿತ ವಿಧಾನ ಸಭೆಯಲ್ಲಿ ನನ್ನ ಮೇಲೆ ಆರೋಪಗಳನ್ನು ಮಾಡಿದ್ದಾರೆ. ಅವುಗಳಲ್ಲಿ ಕೆಲವು ಮೂರು ವರ್ಷಗಳ ಹಿಂದಿನ ಘಟನೆಗಳು ಹಾಗೂ ಉಳಿದವು ಸುಮಾರು ಇಪ್ಪತ್ತು ವರ್ಷಗಳ ಹಿಂದಿನ ಸಾಲಿಗೆ ಸಂಬಂಧಿಸಿದ್ದವು. ಆರೋಪಗಳಿಗೆ ಸಂಬಂಧಿಸಿದ ದಾಖಲಾತಿಗಳನ್ನು ಮಾನ್ಯ ಅಧ್ಯಕ್ಷರವರ ಕಛೇರಿಗೆ ಕೊಟ್ಟಿದ್ದೇವೆಂದು ಮಾನ್ಯ ವಿರೋಧ ಪಕ್ಷದ ನಾಯಕರು ತಿಳಿಸಿದ್ದರಿಂದ ದಿನಾಂಕ 2.9.1994 ರಂದು ಅವುಗಳನ್ನು [illegible]ಯಲಾಯಿತು. ಆದರೆ ಅವು ಆರೋಪಗಳನ್ನು ಸಮರ್ಥಿಸುವ ದಾಖಲೆಗಳಲ್ಲ. ಇಂಡಸ್ಟ್ರಿಯಲ್ ಸಹಕಾರ ಬ್ಯಾಂಕಿಗೆ ಸಂಬಂಧಿಸಿದ ಯಾವ ಮೂಲ ದಾಖಲೆಗಳನ್ನು ನನಗೆ ಒದಗಿಸಿಲ್ಲ. ಉಳಿದವುಗಳು ಬೆಳಗಾಂ ವಿಭಾಗಾಧಿಕಾರಿಗಳು 'ರಹಸ್ಯ' ವೆಂದು ಕಂದಾಯ ಆಯುಕ್ತರವರಿಗೆ ಬರೆದ ಪತ್ರಗಳು. ಇಷ್ಟೇ ದಾಖಲೆಗಳಿಂದ ಸ್ಪಷ್ಟವಾದ ಉತ್ತರ ಕೊಡುವುದು ಸಾಧ್ಯವಿಲ್ಲ. ಆದಾಗ್ಯೂ ಲಭ್ಯವಿರುವ ದಾಖಲೆಗಳು ಹಾಗೂ ನೆನಪಿನ ಆಧಾರದ ಮೇಲಿಂದ ಈ ಸಭೆಯ ಮುಂದೆ ನಾನು ಆಪಾದನೆಗಳಿಗೆ ಸಂಬಂಧಿಸಿದ ಹಾಗೆ ಉತ್ತರ ಕೊಡಲಿಚ್ಚಿಸಿದ್ದೇನೆ.

ಮಾನ್ಯ ಅಧ್ಯಕ್ಷರೆ, ನಾನು ಕರ್ನಾಟಕ ಭೂ ಸುಧಾರಣಾ ಕಾನೂನನ್ನು ಉಲ್ಲಂಘಿಸಿ ಅಮರಗೋಳ ಗ್ರಾಮದ ಬ್ಲಾಕ್ ಸಂಖ್ಯೆ : 614 ರಲ್ಲಿ 30 ಏಕರೆ 2 ಗುಂಟೆ ಜಮೀನನ್ನು ಖರೀದಿಸಿದ್ದೇನೆ ಎಂದು ಆಪಾದನೆ ಮಾಡಲಾಗಿದೆ. ಮಾನ್ಯ ವಿರೋಧ ಪಕ್ಷದ ನಾಯಕರು ವಿಭಾಗಾಧಿಕಾರಿಗಳ ದಿನಾಂಕ 16.6.94 ರ ಪತ್ರವನ್ನು ಆಧಾರವಾಗಿಟ್ಟುಕೊಂಡು ಆಪಾದಿಸಿದ್ದಾರೆ. ಆದರೆ ವಿಭಾಗಾಧಿಕಾರಿಗಳು ತಮ್ಮ ವರದಿಯಲ್ಲಿ ನಾನು ಕರ್ನಾಟಕ ಭೂ ಸುಧಾರಣಾ ಕಾನೂನಿನ ಯಾವ ಕಲಂ ಅನ್ನು ಉಲ್ಲಂಘಿಸಿ ಜಮೀನು ಖರೀದಿಸಿದ್ದೇನೆ? ಎಂಬುದನ್ನು ತಿಳಿಸಿಲ್ಲ. ಯಾವ ಯಾವ ಕಾರಣಗಳಿಂದ ಕಾನೂನಿನ ಉಲ್ಲಂಘನೆಯಾಗಿದೆ ಹಾಗೂ ಅದಕ್ಕೆ, ಆಧಾರವಾದ ದಾಖಲೆಗಳೇನು ಎಂಬುದರ ಬಗ್ಗೆ ಸಮರ್ಥನೀಯವಾದ ದಾಖಲೆಗಳನ್ನು ಒದಗಿಸಿಲ್ಲ. ನಾನು ಕರ್ನಾಟಕ ಭೂ ಸುಧಾರಣಾ ಕಾನೂನಿನ ಕಲಂ 80 (1) ರ ಅಡಿಯಲ್ಲಿ ವ್ಯವಸಾಯ ಭೂಮಿಯನ್ನು ಕೊಳ್ಳಲು ಸಂಬಂಧಿಸಿದ ಉಪ ವಿಭಾಗಾಧಿಕಾರಿಯವರಿಗೆ ಅನುಮತಿಗಾಗಿ ದಿನಾಂಕ 10.9.91 ರಂದು ಅರ್ಜಿ ಸಲ್ಲಿಸಿದ್ದೆ. ಉಪ ವಿಭಾಗಾಧಿಕಾರಿಯವರು ಕಲಂ 80 (1)ರ ಅನ್ವಯ ನನ್ನ ಅರ್ಜಿಯನ್ನು ಪರಿಶೀಲಿಸಿ ದಿ : 18.9.91 ರಂದು ಭೂಮಿ ಕೊಳ್ಳಲು ಅನುಮತಿ

ಕೊಟ್ಟಿದ್ದಾರೆ. ಮಾನ್ಯ ವಿರೋಧ ಪಕ್ಷದ ನಾಯಕರು ಹೇಳಿದಂತೆ ಮಾರನೇ ದಿನವೇ ಅನುಮತಿ ಕೊಡಲಾಗಿದೆ ಎಂಬುದು ಪಕ್ಷದ ನಾಯಕರು ಹೇಳಿದಂತೆ ಮಾರನೇ ದಿನವೇ ಅನುಮತಿ ಕೊಡಲಾಗಿದೆ ಎಂಬುದು ತಪ್ಪು ಮಾಹಿತಿಯಿಂದ ಕೂಡಿದುದಾಗಿದೆ. ಧಾರವಾಡ ಉಪ ವಿಭಾಗಾಧಿಕಾರಿಯವರು ಜಮೀನು ಖರೀದಿಸಲು ಎಂಟು ದಿವಸಗಳ ನಂತರ ಪರವಾನಿಗೆ ಕೊಟ್ಟಿದ್ದಾರೆ. ಈ ವಿಷಯವನ್ನು ಧಾರವಾಡ ಜಿಲ್ಲಾಧಿಕಾರಿಗಳು ದಿನಾಂಕ 18.5.1994 ರ ಪತ್ರದಲ್ಲಿ ಸ್ಪಷ್ಟವಾಗಿ ತಿಳಿಸಿದ್ದಾರೆ. ಅರ್ಜಿದಾರರು ಭೂ ಸುಧಾರಣಾ ಕಾನೂನಿನ ಕಲಂ 80(1) ರ ಅಡಿಯಲ್ಲಿ ಅರ್ಜಿ ಹಾಕುವಾಗ ಅರ್ಜಿಯಲ್ಲಿ ಖರೀದಿಸುವ ಜಮೀನಿನ ಸರ್ವೆ ನಂಬರ್, ಜಮೀನಿನ ವಿಸ್ತಾರ ಇತ್ಯಾದಿ ಕೊಡಬೇಕೆಂದು ಎಲ್ಲಿಯೂ ಹೇಳಿಲ್ಲ. ಧಾರವಾಡದ ಉಪ ವಿಭಾಗಾಧಿಕಾರಿಗಳು, ಕರ್ನಾಟಕ ಭೂ ಸುಧಾರಣಾ ಕಾಯಿದೆ ಕಲಂ 80 ರ ಅನ್ವಯ ಕಾನೂನು ಬದ್ಧವಾಗಿ ಕ್ರಮ ಕೈಗೊಂಡಿದ್ದಾರೆ. ಜಮೀನು ಖರೀದಿಗೆ ಪರವಾನಿಗೆ ಕೊಡುವಾಗ ಕಾನೂನಿನ ಷರತ್ತುಗಳನ್ನು ವಿಧಿಸಿಯೇ ಪರವಾನಿಗೆ ಕೊಟ್ಟಿದ್ದಾರೆ.

ಧಾರವಾಡ ಉಪ ವಿಭಾಗಾಧಿಕಾರಿಗಳ ಪರವಾನಿಗೆ ಆದೇಶ ದಿನಾಂಕ 18.9.91 ರ ಅನ್ವಯ ನಾನು ಕರ್ನಾಟಕ ಭೂ ಸುಧಾರಣಾ ಕಾಯಿದೆಯ ಕಲಂ 81 ರ ಪ್ರಕಾರ ದಿನಾಂಕ 7.5.92 ರಂದು ಉಪ ವಿಭಾಗಾಧಿಕಾರಿಗಳ ಮುಂದೆ ಘೋಷಣೆಯ ಪತ್ರ ನೀಡಿ ದಿನಾಂಕ 18.5.92 ರಂದು ಖರೀದಿ ನೊಂದಣಿ ಮಾಡಿಸಿರುತ್ತೇನೆ. ಅಂದರೆ ವ್ಯವಸಾಯ ಜಮೀನು ಖರೀದಿಯ ಪರವಾನಿಗೆ ಸಚಿವನಾಗಿ ಅಧಿಕಾರ ದುರುಪಯೋಗ ಮಾಡಿಕೊಂಡಿದ್ದೇನೆಂದು ಹೇಳುವುದು ಸತ್ಯಕ್ಕೆ ದೂರವಾದುದು. ಶಾಸಕನಾಗಿದ್ದಾಗ ಪ್ರಭಾವ ಬೀರಿದ್ದಿದ್ದರೆ ಜಮೀನು ಖರೀದಿ ನೊಂದಾಣಿ ಮಾಡಿಸಲು ಎಂಟು ತಿಂಗಳುಗಳ ಕಾಲ ಸಮಯ ತೆಗೆದುಕೊಳ್ಳುತ್ತಿರಲಿಲ್ಲ. ಆದ್ದರಿಂದ ನಿರಾಧಾರವಾಡ ಆರೋಪ ಮಾಡುವುದು ಸರಿಯಾದುದಲ್ಲ.

ಕರ್ನಾಟಕ ಭೂ ಸುಧಾರಣಾ ಕಾಯಿದೆಯ ಕಲಂ 79 (ಎ) ರೀತ್ಯಾ ಯಾವುದೇ ರೀತಿಯ ಆದಾಯ ಸತತವಾಗಿ ಐದು ವರ್ಷಗಳ ಕಾಲ ವ್ಯವಸಾಯೇತರ ಮೂಲಗಳಿಂದ ಐವತ್ತು ಸಾವಿರಕ್ಕಿಂತ ಜಾಸ್ತಿಯಿದ್ದರೆ ವ್ಯವಸಾಯಗಾರನಲ್ಲದ ವ್ಯಕ್ತಿ ವ್ಯವಸಾಯ ಜಮೀನು ಕೊಳ್ಳಲು ಅವಕಾಶವಿಲ್ಲ. ಆ ಕಾನೂನು ಅಡಿಯಲ್ಲಿ ನಾನು ಡಿಕ್ಲರೇಶನ್ ಮಾಡಿ ಜಮೀನು ಕೊಂಡಿದ್ದೇನೆ. ನನ್ನ ಡಿಕ್ಲರೇಶನ್ ಸರಿಯಾದುದಲ್ಲವೆಂದು ಸಾಕ್ಷಾಧಾರ ಗಳಿಂದ ವಿಭಾಗಾಧಿಕಾರಿಗಳು ಆರೋಪ ಮಾಡಬೇಕಾಗಿತ್ತು. ಅವರು ತಮ್ಮ ವಾದಕ್ಕೆ ಸಮರ್ಥನೆಯಾಗಿ ಯಾವುದೇ ಪುರಾವೆ ಒದಗಿಸಿಲ್ಲ. ನನ್ನ 1986 ರಿಂದ 1991 ರ ಅವಧಿಯ ಆದಾಯ ಐವತ್ತು ಸಾವಿರಕ್ಕೂ ಮೀರಿರಲಿಲ್ಲ.

ಮಾನ್ಯ ಅಧ್ಯಕ್ಷರೆ, ನನ್ನ ಮೇಲೆ ಮಾಡಿರುವ ಎರಡನೇಯ ಆಪಾದನೆಯು ಏನೆಂದರೆ ಕರ್ನಾಟಕ ಭೂ ಸುಧಾರಣಾ ಕಾಯಿದೆಯ ಕಲಂ 80 (1) (ಎ) ವಿರುದ್ಧವಾಗಿ ವ್ಯವಸಾಯ ಭೂಮಿ ಹೊಂದಲು ಅನರ್ಹರಾದ ನನ್ನ ಹೆಂಡತಿ, ಮಕ್ಕಳಿಗೆ ಸದರಿ ಭೂಮಿಯನ್ನು ಮಾರಾಟ ಮಾಡಿದ್ದೇನೆ ಎಂಬುದು. ಈ ಆಪಾದನೆಯನ್ನು ಸಾಮಾನ್ಯ ಮಟ್ಟದ ಕಾನೂನು ಪರಿಜ್ಞಾನವಿಲ್ಲದ ಉಪ ವಿಭಾಗಾಧಿಕಾರಿಯವರು ಮಾಡಿದ್ದಾರೆ. ಇಲ್ಲಿ ನಾವು ಮುಖ್ಯವಾಗಿ ಗಮನಿಸಬೇಕಾದುದು

ಕರ್ನಾಟಕ ಭೂ ಸುಧಾರಣಾ ಕಾಯಿದೆಯ ಕಲಂ 2(11) ಮತ್ತು ಕರ್ನಾಟಕ ಕಾಯಿದೆಯ ಕಲಂ 128, ಸದರಿ ಆಸ್ತಿಯು ಸ್ವಯಾರ್ಜಿತ ಆಸ್ತಿಯಾಗಿದ್ದರಿಂದ ಹಾಗೂ ನನ್ನ ಆರೋಗ್ಯ ಸದಾ ಕೈಕೊಡುತ್ತಿದ್ದುದರಿಂದ ನಾನು ಖರೀದಿಸಿದ ಜಮೀನನ್ನು ನನ್ನ ವಾರಸುದಾರರಿಗೆ ಹಿಸ್ಸಾ (ಭಾಗ) ಮಾಡಿ ಕೊಟ್ಟಿದ್ದೇನೆ. ಕರ್ನಾಟಕ ಕಂದಾಯ ಕಾಯಿದೆಯ ಕಲಂ 128 ರೀತ್ಯಾ ಹಿಂದೂ ಅವಿಭಕ್ತ ಕುಟುಂಬದ ವ್ಯವಸಾಯ ಜಮೀನನ್ನು ಭಾಗ ಮಾಡಿಕೊಳ್ಳಲು ಅವಕಾಶವಿದೆ. ಹಿಂದೂ ಅವಿಭಕ್ತ ಕುಟುಂಬಕ್ಕೆ ಅನ್ವಯವಾಗುವ ವಾರಸಾ ಕಾಯಿದೆಯ ರೀತ್ಯಾ ನನ್ನ ವಾರಸುದಾರರಿಗೆ ನನ್ನ ಜೀವಿತ ಕಾಲದಲ್ಲಿಯೇ ಸ್ವಯಾರ್ಜಿತ ಆಸ್ತಿಯನ್ನು ಭಾಗ ಮಾಡಿಕೊಟ್ಟಿದ್ದೇನೆ. ಅಲ್ಲದೆ ಕರ್ನಾಟಕ ಭೂ ಸುಧಾರಣಾ ಕಾಯಿದೆಯ ಕಲಂ 2 (11) ರೀತ್ಯಾ 'ಕುಟುಂಬ' ಎಂದರೆ ಹಿಂದೂ ಅವಿಭಕ್ತ ಕುಟುಂಬದ ಎಲ್ಲ ಸದಸ್ಯರೂ ಬರುತ್ತಾರೆ. ಒಂದು ಅವಿಭಕ್ತ ಕುಟುಂಬದಲ್ಲಿ ತಂದೆ ವ್ಯವಸಾಯಗಾರನಾದರೆ ಅವನ ಹೆಂಡತಿ, ಹಾಗೂ ಮಕ್ಕಳು ವ್ಯವಸಾಯಗಾರರಾಗುತ್ತಾರೆ. ತಂದೆಯ ಆಸ್ತಿ ಹೆಂಡತಿ ಮತ್ತು ಮಕ್ಕಳಿಗೆ ವಾರಸುದಾರಿಕೆಯಿಂದ ಬರುತ್ತದೆ. ಇಂಥಹ ಆಸ್ತಿಯನ್ನು ವಿಭಾಗ ಮಾಡಿದರೆ ಸಾಕು ಅದನ್ನು ವರ್ಗಾಯಿಸುವುದು ಅವಶ್ಯಕತೆಯಿಲ್ಲ. ಸದರಿ ಭೂಮಿಯನ್ನು ವ್ಯವಸಾಯ ಮಾಡುವ ಸದುದ್ದೇಶಕ್ಕಾಗಿಯೇ ಉಪಯೋಗಿಸಲಾಗುತ್ತದೆ. ಆದ್ದರಿಂದ ಕರ್ನಾಟಕ ಭೂ ಸುಧಾರಣೆ ಕಾಯಿದೆಯ ಕಲಂ 80 (1) ಉಲ್ಲಂಘನೆ ಮಾಡಿ ನನ್ನ ವಾರಸುದಾರರಿಗೆ ಭೂಮಿಯನ್ನು ಹಸ್ತಾಂತರ ಮಾಡಿದ್ದೇನೆಂದು ಹೇಳುವುದು ಸತ್ಯಕ್ಕೆ ದೂರವಾದುದು ಹಾಗೂ ಈ ನಾಡಿನ ಕಾನೂನಿನ ಪರಿಜ್ಞಾನವಿಲ್ಲದೆ ಮಾಡಲಾಗಿದೆ.

ಮಾನ್ಯ ಅಧ್ಯಕ್ಷರೆ, ನನ್ನ ಮೇಲೆ ಮಾಡಿರುವ ಮೂರನೇ ಆರೋಪವೇನೆಂದರೆ, ನಾನು ಖರೀದಿಸಿದ ಸ್ವತ್ತು ಅಪಮೌಲ್ಯವಾಗಿದ್ದು ಸ್ಟ್ಯಾಂಪ್ ವೆಚ್ಚ ಕಡಿಮೆ ಮಾಡಿ ಸರ್ಕಾರಕ್ಕೆ ಹಾನಿಯಾಗಿದೆ ಎಂಬುದು. ಈ ಆಪಾದನೆಯು ಅಪ್ಪಟ ಸುಳ್ಳು. ಸದರಿ ಜಮೀನನ್ನು ಖರೀದಿಸಿದ್ದು ದಿನಾಂಕ 8.5 1992, ಮಾರಾಟ ಒಪ್ಪಂದ ಮಾಡಿಕೊಂಡಿದ್ದು 90-91ನೇ ಸಾಲಿನಲ್ಲಿ ಕರ್ನಾಟಕ ಮುದ್ರಾಂಕ ಕಾಯಿದೆಯಲ್ಲಿ ಎಲ್ಲಿಯೂ ಎಕರೆಗೆ ಎಷ್ಟು ಸ್ಟ್ಯಾಂಪ್ ವೆಚ್ಚ ಕಟ್ಟಬೇಕೆಂದು ಹೇಳಿಲ್ಲ. ಕರ್ನಾಟಕ ಮುದ್ರಾಂಕ ಕಾಯಿದೆಯಲ್ಲಿ ಎಲ್ಲಿಯೂ ಎಕರೆಗೆ ಎಷ್ಟು ಸ್ಟ್ಯಾಂಪ್ ವೆಚ್ಚ ಕಟ್ಟಬೇಕೆಂದು ಹೇಳಿಲ್ಲ. ಕರ್ನಾಟಕ ನೋಂದಾಣಿ ಇಲಾಖೆಯ ಸುತ್ತೋಲೆಯನ್ವಯ ಭೂಮಿಯ ಫಲವತ್ತತೆ ಹಾಗೂ ರಸ್ತೆಯ ಸಾಮಿಪ್ಯ ಇತ್ಯಾದಿ ನೋಡಿ ಅಂದಾಜು ಬೆಲೆ ಕಟ್ಟಲು ಸೂಚಿಸಲಾಗಿದೆ. ವ್ಯಾಲ್ಯೂಯೇಶನ್ ಗೈಡ್ ಲೈನ್ಸ್ ರಿಜಿಸ್ಟರಿನಲ್ಲಿ ಸದರಿ ಗ್ರಾಮದ ಎರಿ ಜಮೀನಿಗೆ 91-92ನೇ ಸಾಲಿಗೆ ಎಕರೆಗೆ 28, 000 -00 (ಇಪ್ಪತ್ತೆಂಟು ಸಾವಿರ ರೂಪಾಯಿಗಳು ಮಾತ್ರ) ರೂಪಾಯಿ ಎಂದಿದೆ. ಆದರ ನಾನು ತೆಗೆದುಕೊಂಡ ಜಮೀನಿನಲ್ಲಿ ಸುಮಾರು ಏಳು ಎಕರೆ ಕರಾಬು ಜಮೀನು ಇದೆ. ಹಾಗೂ ಆದರೆ ಕಂದಾಯ ಎಕರೆಗೆ ರೂ.3.00 ಎಂದು ಲೆಕ್ಕ ಹಾಕಲಾಗಿದೆ, ಅಲ್ಲದೆ ಸದರಿ ಜಮಿನು ರಸ್ತೆಯಿಂದ ದೂರ ಇದೆ. ಈ ಎಲ್ಲಾ ಕಾರಣಗಳಿಂದ ಸದರಿ ಜಮೀನಿನ ಮೌಲ್ಯವನ್ನು ರೂ.15,000-00 (ಹದಿನೈದು ಸಾವಿರ ರೂಪಾಯಿಗಳು ಮಾತ್ರ) ಎಂದು ಆ ಜಮೀನಿಗೆ ಸಬ್ ರಿಜಿಸ್ಟ್ರಾರ್‌ರವರು ನಿಗದಿ ಮಾಡಿದ್ದಾರೆ. ಅದು ನೊಂದಣಿಯಾದ ಸಮಯದಲ್ಲಿ ನಾನು ಸಚಿವನಾಗಿರಲಿಲ್ಲ. ನಾನು

ಯಾವುದೇ ರೀತಿಯ ಪ್ರಭಾವ ಉಪಯೋಗಿಸಿಲ್ಲ. ಒಂದು ವೇಳೆ ಜಿಲ್ಲಾಧಿಕಾರಿಗಳು ಮತ್ತು ವಿಭಾಗಾಧಿಕಾರಿಗಳು ಸದರಿ ಸ್ವತ್ತು ಅಪಮೌಲ್ಯವಾಗಿದ್ದರೆ ಈ ಪ್ರಕರಣವನ್ನು ಅಪಮೌಲ್ಯದ ಪ್ರಕರಣವೆಂದು ಮುದ್ರಾಂಕ ಕಾಯಿದೆಯ ಕಲಂ 45 ಎ ರೀತ್ಯಾ ಜಿಲ್ಲಾ ನೋಂದಾಣಿಯ ಅಧಿಕಾರಿಗಳಿಗೆ ದೂರು ಕೊಡಬೇಕಾಗಿತ್ತು. ಜಿಲ್ಲಾಧಿಕಾರಿಗಳಿಗೆ ದಿನಾಂಕ 2.2.1994ರಂದು ಶ್ರೀ ವೈ. ಎಂ. ಕೇಂದ್ರಿ ಎಂಬ ಜಿಲ್ಲಾ ನೊಂದಣಿ ಅಧಿಕಾರಿಗಳು ವರದಿ ಮಾಡಿದ್ದಾರೆ. ಅವರ ವರದಿ ಬಂದ ನಂತರ ಜಿಲ್ಲಾಧಿಕಾರಿಗಳು ಕಲಂ 45 ಎ ರೀತ್ಯಾ ಕ್ರಮ ಕೈಗೊಳ್ಳಲು ಜಿಲ್ಲಾ ನೊಂದಣಿ ಅಧಿಕಾರಿಗಳಿಗೆ ದೂರು ಕೊಡಬಹುದಾಗಿತ್ತು. ಇಲ್ಲದೆ ಜಿಲ್ಲಾ ನೊಂದಣಿ ಅಧಿಕಾರಿಗಳಾದ ಶ್ರೀ ವೈ. ಎಂ. ಕೇಂದ್ರಿಯವರು ತಮ್ಮ ಗಮನಕ್ಕೆ ಬಂದ ತಕ್ಷಣ ಸ್ವತಃ ಅವರೇ ಕಾನೂನಿನ ರೀತ್ಯಾ ಕಲಂ 45 ಎ ರೀತ್ಯಾ ಸ್ವತ್ತು ಅಪಮೌಲ್ಯ ಪ್ರಕರಣವೆಂದು ಪರಿಗಣಿಸಿ ಕಾನೂನಿನ ಕ್ರಮ ಕೈಗೊಳ್ಳಬಹುದಾಗಿತ್ತು. ಸರಕಾರಕ್ಕೆ 8.5.1994 ರ ವರೆಗೆ ಈ ಕ್ರಮ ಕೈಗೊಳ್ಳಲು ಅವಕಾಶವಿತ್ತು. ಅವರು ಮುದ್ರಾಂಕ ಕಾಯಿದೆಯ ರೀತ್ಯಾ ಕ್ರಮ ಕೈಗೊಂಡಿದ್ದರೆ ನಾನು ನ್ಯಾಯಾಲಯದಲ್ಲಿ ಅಥವಾ ಮೇಲ್ಮನವಿಯಲ್ಲಿ ಅವರ ಕ್ರಮವನ್ನು ಪ್ರಶ್ನಿಸುತ್ತಿದ್ದೆ. ಹಾಗೂ ನಾನು ಖರೀದಿಸಿದ ಬೆಲೆ ಕಾನೂನು ಬದ್ಧವಾದುದೆಂದು ವಾದಿಸುತ್ತಿದ್ದೆ. ಇದರಲ್ಲಿ ನನ್ನದೇನೂ ತಪ್ಪಾಗಿಲ್ಲ.

ಮಾನ್ಯ ಅಧ್ಯಕ್ಷರೆ, ನನ್ನ ಮೇಲಿನ ನಾಲ್ಕನೆಯ ಆರೋಪವೇನೆಂದರೆ ನನ್ನ ಮಗನಾದ ಶ್ರೀ ಉದಯ ಸಾಂಡ್ರ ಉಳಿದ ಆರು ಜನರೊಂದಿಗೆ ಸೇರಿ ಪಟ್ಟಣ ಭೂಮಿತಿ ಕಾಯಿದೆಯ ಉಲ್ಲಂಘಿಸಿ ಸರ್ವೆ 70 :1 ಮತ್ತು 70:2 ರಲ್ಲಿ ಜಮೀನು ಖರೀದಿಸಿದ್ದಾರೆಂಬುದು. ಈ ಆರೋಪವು ಯಾವ ಮಗ್ಗಲಿನಿಂದ ನೋಡಿದರೂ ನನಗೆ ಸಂಬಂಧಿಸಿದ್ದಲ್ಲ. ಈ ವಿಷಯದಲ್ಲಿ ನನ್ನ ಕೈವಾಡವಿಲ್ಲವೆಂದು ಧಾರವಾಡ ಜಿಲ್ಲಾಧಿಕಾರಿಗಳೇ ವಿಭಾಗಾಧಿಕಾರಿಗಳಿಗೆ ಬರೆದ ಪತ್ರದಲ್ಲಿ ಸ್ಪಷ್ಟವಾಗಿ ಹೇಳಿದ್ದಾರೆ. ಅಲ್ಲದೆ ನನ್ನ ಮಗ ಜಮೀನು ಕೊಂಡಿದ್ದು 2 ಎಕರೆ ಅಲ್ಲ ಬರೀ 20 ಗುಂಟೆ. ಈ ಸ್ವತ್ತಿನ ವಿಷಯವಾಗಿ ಕರ್ನಾಟಕ ಉಚ್ಚನ್ಯಾಯಾಲಯದಲ್ಲಿ ರಿಟ್ ದಾಖಲೆಯಾಗಿದೆ. ಅದು ತೀರ್ಮಾನಕ್ಕಾಗಿ ಗೌರವಾನ್ವಿತ ಉಚ್ಚ ನ್ಯಾಯಾಲಯದ ಮುಂದಿದೆ. ಆದ್ದರಿಂದ ಈ ವಿಷಯದ ಬಗ್ಗೆ ಈ ಸದನದಲ್ಲಿ ಚರ್ಚಿಸುವುದು ಸಬ್ ಜ್ಯೂಡೀಸಾಗುತ್ತದೆ. ಅಲ್ಲದೆ ಕರ್ನಾಟಕ ವಿಧಾನ ಮಂಡಲದ ವ್ಯವಹಾರ ನಿರ್ವಹಣಾ ನಿಯಮಗಳ 160 (8) ರೀತ್ಯಾ ನ್ಯಾಯಾಲಯದ ಮುಂದಿರುವ ವಿಷಯದ ಬಗ್ಗೆ ಚರ್ಚಿಸಲು ಅವಕಾಶವಿಲ್ಲ. ಆದ್ದರಿಂದ ಈ ವಿಷಯದ ಬಗ್ಗೆ ಹೆಚ್ಚಿಗೆ ಹೇಳುವುದು ಹಾಗೂ ಚರ್ಚಿಸುವುದು ಸೂಕ್ತವಾದುದಲ್ಲವೆಂದು ನನ್ನ ವಯಕ್ತಿಕ ಅಭಿಪ್ರಾಯವಾಗಿದೆ.

ಮಾನ್ಯ ಅಧ್ಯಕ್ಷರೆ, ನನ್ನ ವಿರೋಧ ಪಕ್ಷದ ನಾಯಕರು ಮಾಡಿರುವ ಐದನೇ ಆರೋಪವೇನೆಂದರೆ ನಾನು ಜಿಲ್ಲಾ ಕೈಗಾರಿಕಾ ಸಹಕಾರ ಬ್ಯಾಂಕಿನ ಅಧ್ಯಕ್ಷನಾಗಿದ್ದ ಸಂದರ್ಭದಲ್ಲಿ ನನ್ನ ಸಂಬಂಧಿಕರು ಹಾಗೂ ನನ್ನ ಸ್ನೇಹಿತರಿಗೆ ಸಾಲ ಮಂಜೂರು ಮಾಡಿ ಬ್ಯಾಂಕಿಗೆ ಹಾನಿ ಮಾಡಿದ್ದೇನೆಂದು ಆರೋಪಿಸಲಾಗಿದೆ. ಈ ಆರೋಪ ಸತ್ಯಕ್ಕೆ ದೂರವಾದುದು ಆಗಿರುತ್ತದೆ. ಜಿಲ್ಲಾ ಕೈಗಾರಿಕಾ ಸಹಕಾರ ಬ್ಯಾಂಕಿಗೆ ನಾನು ರೂ 1.25 ಲಕ್ಷ ಕೊಡಬೇಕಾಗಿಲ್ಲ. ನಾನು ಆ

ಬ್ಯಾಂಕಿನಿಂದ ಸಾಲವನ್ನೂ ತೆಗೆದುಕೊಂಡು ಸಾಲ ತೀರಿಸದೇ ಸುಸ್ತಿದಾರನಾಗಿರುವುದಿಲ್ಲ. ಸದರಿ ಬ್ಯಾಂಕ್ ಪ್ರಾರಂಭವಾಗಿದ್ದು 1954 ರಲ್ಲಿ ನಾನು ಆ ಬ್ಯಾಂಕ್ ಅಧ್ಯಕ್ಷನಾಗಿದ್ದು 1973 -74ನೇ ಸಾಲಿನಲ್ಲಿ ಅಲ್ಲದೆ ಕರ್ನಾಟಕ ಕ್ಯಾಲಂಡರಿಂಗ್ ಅಂಡ್ ಫಿನಿಶೀಂಗ್ ಕೋ-ಆಫ್ ಅಸೋಸಿಯೇಷನ್ ಮತ್ತು ಧಾರವಾಡ ಜಿಲ್ಲಾ ನೇಕಾರರ ಸಹಕಾರ ಫೆಡರೇಷನ್ ಇವುಗಳಿಗೆ ನಾನು ಅಧ್ಯಕ್ಷನಾಗಿಲ್ಲ. ಧಾರವಾಡ ಜಿಲ್ಲಾ ನೇಕಾರರ ಸಹಕಾರಿ ಫೆಡರೇಷನ್ನಿಗೆ ನಾನು ನಿರ್ದೇಶಕನೂ ಆಗಿಲ್ಲ. ಮತ್ತು ಅದರ ಪ್ರಾಥಮಿಕ ಸದಸ್ಯನೂ ಸಹ ಆಗಿಲ್ಲ. ಸದರಿ ಸಹಕಾರ ಸಂಸ್ಥೆಯು ಕರ್ನಾಟಕ ಕೈಗಾರಿಕಾ ಸಹಕಾರ ಬ್ಯಾಂಕಿಗೆ ರೂ, 15 ಲಕ್ಷ ಸಾಲ ಕೊಡಬೇಕಾಗಿದೆ. ಆ ಸಾಲಕ್ಕಾಗಿ ಬ್ಯಾಂಕ್ ಸೂಕ್ತವಾದ ಭದ್ರತೆಯನ್ನು ತೆಗೆದುಕೊಂಡಿದೆ. ಅಲ್ಲದೆ ಸರ್ಕಾರವು ಮೇಲೆ ಹೇಳಿದ ಸಹಕಾರ ಫೆಡರೇಷನ್ನಿಗೆ ರೂ.23.60 ಲಕ್ಷ ರೂಪಾಯಿಗಳನ್ನು ಕೊಡಬೇಕೆಂದು ಸಹಕಾರ ಸಂಘಗಳ ನಿಬಂಧಕರು ಡಿಕ್ರಿಯನ್ನು ಮಾಡಿದ್ದಾರೆ. ಆ ಸಂಸ್ಥೆಯಿಂದ ಕಾನೂನು ರೀತ್ಯಾ ಸಾಲ ವಸೂಲಿ ಆಗುವುದಕ್ಕೆ ನಾನು ಯಾವುದೇ ರೀತಿಯ ಅಡ್ಡಿಯಾಗಿರುವುದಿಲ್ಲ. ಮತ್ತೊಂದು ವಿಷಯವೇನೆಂದರೆ ಕರ್ನಾಟಕ ಕ್ಯಾಲಂಡರಿಂಗ್ ಅಂಡ್ ಫಿನಿಶೀಂಗ್ ಕೋ ಆಫ್ ಅಸೋಸಿಯೇಷನ್ನಿಗೆ ನಾನು ಒಂದು ವರ್ಷ ಮಾತ್ರ ನಾಮಕರಣ ಸದಸ್ಯನಾಗಿದ್ದುದು ಬಿಟ್ಟು ಅದರೊಂದಿಗೆ ಯಾವುದೇ ರೀತಿಯ ಸಂಬಂಧವಿಲ್ಲ. ಅಲ್ಲದೆ ಮಾನ್ಯ ವಿರೋಧ ಪಕ್ಷದ ನಾಯಕರು ಪ್ರವರ್ತಕ ಸುದ್ದಿ ಪತ್ರಕ್ಕೆ ಮತ್ತು ಗಾಯತ್ರಿ ಫರ್ನಿಚರ್ ಈ ಎರಡು ಸಂಸ್ಥೆಯಿಂದ ನಾನು ಕೈಗಾರಿಕಾ ಸಹಕಾರ ಬ್ಯಾಂಕ್‌ಗೆ ಹನ್ನೊಂದು ಸಾವಿರ ರೂಪಾಯಿಗಳನ್ನು ಕೊಡಬೇಕೆಂದು ವಾದಿಸುತ್ತಿದ್ದಾರೆ, ವಾಸ್ತವವಾಗಿ ಹೇಳಬೇಕಾದರೆ ನಾನು ಸದರಿ ಬ್ಯಾಂಕ್‌ನಿಂದ ಯಾವುದೇ ರೀತಿಯ ಸಾಲ ತೆಗೆದುಕೊಂಡಿಲ್ಲ. ನಾನು ಸಾಲಕ್ಕಾಗಿ ಅರ್ಜಿಯನ್ನೂ ಸಹ ಹಾಕಿಲ್ಲ. ಅದು ಕೇವಲ ಅಡಿಟ್ ಆಕ್ಷೇಪಣೆಯಾಗಿದೆ. ಸದರಿ ಆಡಿಟ್ ಆಕ್ಷೇಪಣೆ ಬಗ್ಗೆ ಸಹಕಾರ ಸಂಘಗಳ ಸಂಬಂಧಿಸಿದ ನಿಬಂಧಕರ ಮುಂದೆ ದಾವಾ ಮಾಡಬಹುದಾಗಿತ್ತು, ಕರ್ನಾಟಕ ಸಹಕಾರಿ ಕಾಯಿದೆ 70 ರ ರೀತ್ಯಾ ಬರಬೇಕಾದ ಬಾಕಿಯ ಮೇಲೆ ದಾವ ಹಾಕಬೇಕಾದರೆ ಸಂಬಂಧಿಸಿದ ಸಹಕಾರ ಸಂಸ್ಥೆ 6 ವರ್ಷಗಳ ಒಳಗಾಗಿ ದಾವ ಹಾಕಲು ಅವಕಾಶವಿದೆ. ಬ್ಯಾಂಕ್‌ನವರು ನನ್ನ ಮೇಲೆ ದಾವ ಹಾಕಿದ್ದರೆ ನಾನು ಬ್ಯಾಂಕಿಗೆ ಹಣ ಕಟ್ಟಲು ಹೇಗೆ ಸಾಧ್ಯವಾಗಲಿಲ್ಲ ಎಂಬುದನ್ನು ನಾನು ಸಾಬೀತು ಪಡಿಸುತ್ತಿದ್ದೆ. ಮಾನ್ಯ ವಿರೋಧ ಪಕ್ಷದ ನಾಯಕರು ಮೂಲಕ ದಾಖಲೆಗಳನ್ನು ನೋಡದೆ ಸಹಕಾರ ಕೈಗಾರಿಕಾ ಬ್ಯಾಂಕಿನ ಅಡಾವಳಿ ಪತ್ರ ಪರಿಶೀಲಿಸದೆ ಬ್ಯಾಂಕ್‌ನ ಹಾಲಿ ಮ್ಯಾನೇಜರ್ ಅವರ ದಿನಾಂಕ 16.4.94 ಹಾಗೂ ದಿನಾಂಕ 15.4.94 ರ ಪತ್ರಗಳ ಆಧಾರವಾಗಿಟ್ಟುಕೊಂಡು ನನ್ನನ್ನು ತೇಜೋವಧೆ ಮಾಡಲು ಹೊರಟಿರುವುದು ತುಂಬಾ ವಿಷಾಧನೀಯವಾದುದು. ಸುಮಾರು 10-15 ವರ್ಷಗಳಿಂದ ಬಾಕಿ ಇರತಕ್ಕಂತಹ ವಿಷಯದ ಬಗ್ಗೆ ಇಷ್ಟು ಕಾಲ ಸುಮ್ಮನೆ ಇದ್ದು ಈಗ ರಾಜಕೀಯ ವಿರೋಧಿಗಳ ಕೈಗೊಂಬೆಯಾಗಿರುವುದು ಮತ್ತು ಬ್ಯಾಂಕ್‌ನ ವ್ಯವಸ್ಥಾಪಕರ ದೂರನ್ನು ಆಧಾರವಾಗಿಟ್ಟುಕೊಂಡು ಆರೋಪ ಮಾಡುವುದು ಎಷ್ಟರ ಮಟ್ಟಿಗೆ ಸಮಂಜಸ ಎಂಬುದು ಅವರು ಯೋಚನೆ ಮಾಡಲಿ. ಸಹಕಾರ ಇಲಾಖೆಯಲ್ಲಿ ಸಹಕಾರ ಸಂಘಗಳ ನಿಬಂಧಕರು, ಉಪ ನಿಬಂಧಕರು, ಜಂಟಿ ನಿಬಂಧಕರು ಇದ್ದು ಅವರು ನನ್ನ

ಹಸ್ತಕ್ಷೇಪದ ಬಗ್ಗೆ ಸರ್ಕಾರಕ್ಕೆ ಏನಾದರೂ ವರದಿ ಕೊಟ್ಟಿದ್ದರೆ ಪರಿಶೀಲಿಸಲಿ , ಈಗಿನ ಮ್ಯಾನೇಜರ್‌ರವರ ದುರುದ್ದೇಶದಿಂದ ಕೂಡಿದ ಪತ್ರವನ್ನು ಆಧಾರವಾಗಿಟ್ಟುಕೊಂಡು ಈ ಘನ ಸದನದಲ್ಲಿ ನನ್ನ ಮೇಲೆ ಆರೋಪ ಮಾಡುತ್ತಿರುವ ಶ್ರೀ ದೇಶಪಾಂಡೆಯಂತಹ ಗೌರವಾನ್ವಿತ ವ್ಯಕ್ತಿಗೆ ಶೋಭೆ ತರುವಂತಹದಲ್ಲ.

ಮಾನ್ಯ ಅಧ್ಯಕ್ಷರೆ ತಮ್ಮ ಗಮನಕ್ಕೆ ಹಾಗೂ ತಮ್ಮ ಮೂಲಕ ಸದನದ ಗಮನಕ್ಕೆ ತರಬಯಸುವುದೇನೆಂದರೆ ದಿನಾಂಕ 18.10.93 ರಂದು ನನಗೆ ಆಗದ ಕೆಲವರು ಕಂದಾಯ ಸಚಿವರಾಗಿದ್ದ ಮಾನ್ಯ ರಾಜಶೇಖರ ಮೂರ್ತಿಯವರಿಗೆ ಈ ವಿಷಯದ ಬಗ್ಗೆ ದೂರನ್ನು ಕೊಟ್ಟಾಗ ಸಚಿವರು ವಿಚಾರಣೆಗಾಗಿ ದಿನಾಂಕ 22.10.93 ರಂದು ಜಿಲ್ಲಾಧಿಕಾರಿಯವರಿಗೆ ಆದೇಶಿಸಿದ್ದರು. ಜಿಲ್ಲಾಧಿಕಾರಿಗಳು ತಾರೀಖು 27.01.94 ರಂದು ತನಿಖೆ ಮಾಡಲು ಸೂಚಿಸಿದ್ದು ದಿನಾಂಕ 15.2.94 ರಂದು ಉಪ ವಿಭಾಗಾಧಿಕಾರಿಗಳು ಜಿಲ್ಲಾಧಿಕಾರಿಗಳಿಗೆ ತನಿಖೆ ಮಾಡಿ ವರದಿ ಕಳುಹಿಸಿದ್ದಾರೆ. ಜಿಲ್ಲಾಧಿಕಾರಿಗಳು ವಿಭಾಗಾಧಿಕಾರಿ ಮತ್ತು ಪ್ರಧಾನ ಕಾರ್ಯದರ್ಶಿ, ಕಂದಾಯ ಇಲಾಖೆ ಇವರಿಗೆ ತಾಃ18-5-94 ರಂದು ಪತ್ರ ಬರೆದರು. ವಿಭಾಗಾಧಿಕಾರಿ ಗಳು ತಾಃ 18.6.94 ರಂದು ಸರ್ಕಾರಕ್ಕೆ ಪತ್ರ ಬರೆದರು. ಈ ವಿಚಾರಣಾ ಹಂತದ ಯಾವುದೇ ಸಂದರ್ಭದಲ್ಲಿ ಸರ್ಕಾರವಾಗಲೀ, ನಾನಾಗಲೀ ಎಂದೂ ಹಸ್ತಕ್ಷೇಪ ಮಾಡಿಲ್ಲ. ಆದುದರಿಂದ ಹಸ್ತಕ್ಷೇಪ ಮಾಡಿದ್ದೇನೆ ಎಂದು ಹೇಳುತ್ತಿರುವುದು ನಿರಾಧಾರವಾಗಿದೆ. ಜಿಲ್ಲಾಧಿಕಾರಿಗಳಾಗಲೀ, ವಿಭಾಗಾಧಿಕಾರಿಗಳಾಗಲೀ ಈ ದೂರಿನ ಬಗ್ಗೆ ವಿಚಾರಣೆ ಮಾಡುವಾಗ ನನಗೆ ಸ್ವಾಭಾವಿಕ ನ್ಯಾಯದ ದೃಷ್ಟಿಯಿಂದ ಸತ್ಯಾಂಶ ಹೇಳಲು ಅವಕಾಶವನ್ನು ಕೊಟ್ಟಿಲ್ಲ. ತಪ್ಪುಗ್ರಹಿಕೆಯಿಂದ ಕೂಡಿದ ವರದಿಯನ್ನು ಸರ್ಕಾರಕ್ಕೆ ಕಳುಹಿಸಿದ್ದಾರೆ. ಸ್ವಾಭಾವಿಕ ನ್ಯಾಯ ಹಾಗೂ ಧರ್ಮ ನೀತಿಯ ದೃಷ್ಟಿಯಿಂದ ನನಗೆ ಸೂಕ್ತ ಅವಕಾಶ ಕೊಡುವುದು ಕಾನೂನು ಬದ್ಧವಾಗಿರುತ್ತದೆ.

ಮಾನ್ಯ ಅಧ್ಯಕ್ಷರೆ, ನನ್ನ ಮೇಲೆ ಮಾಡಿರುವ ಈ ಆಪಾದನೆಗಳು ಸತ್ಯಕ್ಕೆ ದೂರವಾದವುಗಳು ಹಾಗೂ ನಿರಾಧಾರವಾದವುಗಳಾಗಿವೆ. ನನ್ನ ಚಾರಿತ್ರ್ಯವಧೆ ಮಾಡಲು ನನ್ನ ರಾಜಕೀಯ ವಿರೋಧಿಗಳು ವ್ಯವಸ್ಥಿತವಾಗಿ ನಡೆಸಿದ ಸಂಚಿನ ಫಲ. ಸಮಾಜದ ಕಡು ಬಡವರೊಂದಿಗಿನ ನನ್ನ ಒಡನಾಟವನ್ನು ಸಹಿಸಿದ ಜನ ಸದಾ ಒಂದಿಲ್ಲ ಒಂದು ಹಗರಣವನ್ನು ನನ್ನ ವಿರುದ್ಧ ಹುಟ್ಟು ಹಾಕುತ್ತಿದ್ದಾರೆ. ಅವರು ವಿರೋಧ ಪಕ್ಷದ ನಾಯಕರಿಗೆ ನನ್ನ ವಿರುದ್ಧ ಗೋಬೆಲ್ ಮಾದರಿಯ ಅಪಪ್ರಚಾರದ ಮಾಹಿತಿ ಒದಗಿಸಿದ್ದಾರೆ. ಆದರೆ ವಾಸ್ತವವಾಗಿ ನಾನು ಯಾವುದೇ ಕಾನೂನಿನ ಉಲ್ಲಂಘನೆ ಮಾಡಿಲ್ಲ. ಈ ದೇಶದ ಕಾನೂನಿಗೆ ಹಾಗೂ ಸಂವಿಧಾನಕ್ಕೆ ವ್ಯತಿರಕ್ತವಾದ ವರ್ತನೆಯನ್ನು ಎಂದೂ ಮಾಡಿಲ್ಲ. ನನ್ನ ಪ್ರತಿಯೊಂದು ವ್ಯವಹಾರವನ್ನು ಕಾನೂನಿನ ಚೌಕಟ್ಟಿನೊಳಗೇ ಮಾಡಿದ್ದೇನೆ. ಕಾನೂನನ್ನು ಉಲ್ಲಂಘಿಸಿದ್ದರೆ ಕಾನೂನು ತನ್ನ ಕ್ರಮವನ್ನು ತೆಗೆದುಕೊಳ್ಳುತ್ತದೆ ಎಂಬ ವಿಷಯ ಮಾನ್ಯ ವಿರೋಧ ಪಕ್ಷದ ನಾಯಕರಿಗೂ ಗೊತ್ತು. ಆಪಾದನೆಯಲ್ಲಿ ಹುರುಳಿಲ್ಲದಿದ್ದರೂ ಅವುಗಳನ್ನು ವೈಭವೀಕರಿಸಿ ಮಾನ್ಯ ವಿರೋಧ ಪಕ್ಷದ ನಾಯಕರಿಗೆ ಹೇಳಲಾಗಿದೆ.

ಶ್ರೀ ಆರ್.ವಿ.. ದೇಶಪಾಂಡೆ : ಮುಖ್ಯಮಂತ್ರಿಗಳು ಇದರ ಬಗ್ಗೆ ತಾವು ಹೇಳಿಕೆ ಮಾಡುವುದಾಗಿ ತಿಳಿಸಿದ್ದರು, ಅದು ರೆಕಾರ್ಡಿನಲ್ಲೂ ಹೋಗಿದೆ.

Morally he is convinced.

Sri M.Veerappa moily (Chief Minister) : One thing I can tell you, nobody is above law. If Mr.Sandra as an individual if he has violated and provisions of the law, he will not be spared. We will take notice. of the law. Law will take its own cource of action. As a Chief Minister, I will be writing to the Hon'ble Minister, because the one grievance which he has, was that the Government till at any level today has not asked him to explain some of these things, I think, as a matter of natural justice, any person will have to be given a chance to explain his position. So, as a Government, on behalf of the Government , I will be asking Mr.Sandra to explain on this point. Of course, he has given a statement here. On specific points which are raised in the report of the Deputy Commissioner and the Divisional Commissioner, I will be writing to Sandra, the Hon'ble Minister for Housing and have replay within three to four days, so that the Government can definitely find out what is the truth. After finding the truth, if there is any violation, the law will take its own course of action.

8.00 ಪಿ.ಎಂ

ಶ್ರೀ ಆರ್.ವಿ. ದೇಶಪಾಂಡೆ :- ಮಾನ್ಯ ಅಧ್ಯಕ್ಷರೇ ಮಾನ್ಯ ಸಾಂಡ್ರಾ ಅವರು ರಾಜೀನಾಮೆ ಕೊಡಬೇಕು ಅಥವಾ ಮಾನ್ಯ ಮುಖ್ಯ ಮಂತ್ರಿಗಳು ಅವರನ್ನು ಡಿಸ್‌ಮಿಸ್ ಮಾಡಬೇಕೆಂದು ನಾವು ಬೇಡಿಕೆಗಳನ್ನು ಇಟ್ಟಿದ್ದೆವು ಅವರು ಲ್ಯಾಂಡ್ ರಿಫಾರ್ಮ್ ಆ್ಯಕ್ಟ್, ಸ್ಯಾಂಪ್ ರಿಜಿಸ್ಟ್ರೇಷನ್ ಆ್ಯಕ್ಟ್, ಅರ್ಬನ್ ಲ್ಯಾಂಡ್ ಸೀಲಿಂಗ್ ಆ್ಯಕ್ಟ್ ಇವನ್ನೆಲ್ಲಾ ಉಲ್ಲಂಘನೆ ಮಾಡಿದ್ದಾರೆ, ಅವರು ಸಚಿವ ಸಂಪುಟದಲ್ಲಿ ಇರಲಿಕ್ಕೆ ಅವರಿಗೆ ಅರ್ಹತೆ ಇಲ್ಲ ಅವರನ್ನು ಡಿಸ್‌ಮಿಸ್ ಮಾಡಬೇಕೆಂದು ಒತ್ತಾಯ ಮಾಡಿದ್ದೇವು. ನಾವು ಒಂದು ಅಪೊರ್ಚುನಿಟಿಯನ್ನು ಕೊಡಬೇಕೆಂದು ಮಾನ್ಯ ಮುಖ್ಯ ಮಂತ್ರಿಗಳು ಹೇಳುತ್ತಾರೆ. ಅಪೊರ್ಚುನಿಟಿ ಕೊಡುವುದು ನಾವು ಅಲ್ಲ ನಿಮಗೆ ಅಧಿಕಾರ ಇದೆ. ತಾವು ಮೊನ್ನೆ 4 ದಿವಸದಿಂದ ತಮ್ಮ ಬೆನ್ನು ಚಪ್ಪರಿಸಿಕೊಂಡು

ಹೇಳಿದಿರಿ, ನೋಡಿ ನಮ್ಮ ಸರಕಾರ ಒಳ್ಳೆಯದು ಇದೆ ತಕ್ಷಣ ಕ್ರಮ ತೆಗೆದು ಕೊಂಡಿದ್ದೇವೆಂದು ಹೇಳಿದಿರಿ. ಹಿರಿಯ ಅಧಿಕಾರಿಗಳು ಯಾರು ಈ ರಾಜ್ಯದಲ್ಲಿ 15-20 ವರ್ಷ ಸೇವೆ ಸಲ್ಲಿಸಿದ್ದಾರೆ ಅವರೇ ವರದಿ ಕಳಿಸಿದ್ದಾರೆ. ಸ್ಟ್ಯಾಂಪ್ ಡ್ಯೂಟಿ ಇವೇಷನ್ ಆಗಿದೆ ಲ್ಯಾಂಡ್ ರಿಫಾರ್ಮ್ ಆ್ಯಕ್ಟ್ ಉಲ್ಲಂಘನೆಯಾಗಿದೆ ಎಂದು ಹೇಳಿದ್ದಾರೆ. ಇದಾದ ನಂತರವೂ ಅವರಿಗೆ ಅಪೊರ್ಚುನಿಟಿ ಕೊಡುವುದಾದರೆ ನನ್ನದೇನೂ ಅಡ್ಡಿ ಇಲ್ಲ.

I am not against it. ಆದರೆ ಪ್ರಶ್ನೆ ಏನು ಇದೆ, ಇವತ್ತು ತಾವು ಈ ಮಾತನ್ನು ಹೇಳಬಾರದು ಇತ್ತು. ಇವತ್ತು ಇಲ್ಲಿ ಈ ವಿಷಯ ಚರ್ಚೆಗೆ ಬಂದು....

ಶ್ರೀ ಕೆ ಹೆಚ್. ರಂಗನಾಥ್:- ತಾವು ರೂಲ್ಸ್ ಪ್ರಕಾರ ಒಂದು ಆಪಾದನೆ ಮಾಡಿ ಮಾನ್ಯ ಮಂತ್ರಿಗಳಿಗೆ ಕೊಟ್ಟಿದ್ದೀರಿ. ಅವರು ಅದನ್ನು ಓದಿ ಅವರದ್ದೇ ಆದಂತಹ ರೀತಿಯಲ್ಲಿ ನಿರಾಕರಣೆ ಮಾಡಿದ್ದಾರೆ. It is between you and the Hon'ble Minister.

ಇದರಿಂದ ಸರಕಾರಕ್ಕೆ ಸಂಬಂಧಪಟ್ಟಂತೆ ಅಂಡರ್ ದಿ ರಿಲವೆಂಟ್ ಆ್ಯಕ್ಟ್ ಅಂಡ್ ರೂಲ್ಸ್ ಏನು ಇದೆ ಎನ್ನುವುದನ್ನು ಮಾನ್ಯ ಮುಖ್ಯ ಮಂತ್ರಿಗಳು ಹೇಳಿದ್ದಾರೆ. ತದ ನಂತರ is true, the law will take its own course ಎಂದು ಹೇಳಿದ್ದಾರೆ. ಸರಕಾರದ ಹೊಣೆ ಎಲ್ಲಿ ಬರುತ್ತದೆ, Whether the particular law has been violated, to what extent.

ಎನ್ನುವುದನ್ನು ವಿರೋಧ ಮಾಡುತ್ತೆನೆ ಅಂದರು. Chief Minister says that he will get an explanation from the Minister concerned and he will do that. Beyond that, what the Chief Minister can do ?

ಶ್ರೀ ಆರ್. ವಿ. ದೇಶಪಾಂಡೆ:- ನಾನು ಎಕ್ಸ್‌ಪ್ಲನೇಷನ್ ತೆಗೆದುಕೊಳ್ಳುತ್ತೇನೆಂದು ಮಾನ್ಯ ಮುಖ್ಯ ಮಂತ್ರಿಗಳು ಹೇಳಿದರು. ಸಂತೋಷ. ಪ್ರಶ್ನೆ ಏನು ಇದೆ ಎಂದು ವಿಚಾರ ಮಾಡಬೇಕು. ಡಿವಿಜನಲ್ ಕಮಿಷನ್ ವರದಿ 4 ದಿವಸಗಳ ಹಿಂದೆ ಬಂದರೆ ನಾವು ಅರ್ಥ ಮಾಡಿಕೊಳ್ಳುತ್ತೇವೆ. ಡಿವಿಜನಲ್ ಕಮಿಷನರ್ ವರದಿ ಬಂದು 2-3 ತಿಂಗಳಾಯಿತು 2-3 ತಿಂಗಳಾದರೆ ಮಾನ್ಯ ಮುಖ್ಯ ಮಂತ್ರಿಗಳು ಈ ರೀತಿಯ ಕ್ರಮ ತೆಗೆದುಕೊಳ್ಳುತ್ತೇವೆಂದು ಹೇಳುವುದಾದರೆ, ಹೇಗೆ ? ತಕ್ಷಣ ಕ್ರಮ ಆಗಲೇ ತೆಗೆದುಕೊಳ್ಳಬೇಕಾಗಿತ್ತು. ಅವರಿಗೆ ಅಪೋರ್ಚುನಿಟಿ ಕೊಡಬೇಕಾಗಿತ್ತು. ಯಾವಾಗ ಅವರಿಗೆ ಅಪೋರ್ಚುನಿಟಿ ಕೊಟ್ಟಿಲ್ಲ ಆಗ ಅವರನ್ನು ಷೀಲ್ಡ್ ಮಾಡುತ್ತಿದ್ದಾರೆಂಬುದು ಬಹಳ ಕ್ಲಿಯರ್ ಆಗಿದೆ. ಇದರ ಬಗ್ಗೆ ಯಾವುದೇ ಸಂಶಯ ಇಲ್ಲ ಸತ್ಯ ಇಲ್ಲ . ಮಾನ್ಯ ಸಾಂಡ್ರಾಜಿಯವರು ತಮ್ಮ ಸೌಭಾಗ್ಯವತಿ ಹೆಸರಿನಲ್ಲಿ ತಮ್ಮ ಮಗನ ಹೆಸರಿನಲ್ಲಿ ಏಕೆ ಪ್ರಾಪರ್ಟಿ ಟ್ರಾನ್ಸ್‌ಫರ್ ಮಾಡಿದ್ದಾರೆ ಎಂಬುದಕ್ಕೆ ನನ್ನ ಆರೋಗ್ಯ ಸರಿ ಇಲ್ಲವೆಂದು ಹೇಳಿದರು. ಇವತ್ತು ಹತ್ತು ಎಕರೆ ಭೂಮಿ ಮಾಡಲಿಕ್ಕೆ ಇವರಿಗೆ ಬರುವುದಿಲ್ಲವೆಂದರೆ ಸರಕಾರದ ಸ್ಟ್ಯಾಂಪ್ ಡ್ಯೂಟಿಯನ್ನು ಇವೇಷನ್ ಮಾಡಿ ಆರೋಗ್ಯ ಸರಿ ಇಲ್ಲವೆಂದು ಪ್ರಾಪರ್ಟಿ ಟ್ರಾನ್ಸ್‌ಫರ್ ಮಾಡುತ್ತಾರೆ. ಹಾಗಾದರೆ ರಾಜ್ಯದ ಸೇವೆ ಮಾಡಲಿಕ್ಕೆ ಇವರಿಗೆ ಹೇಗೆ ಆಗುತ್ತದೆ ? 10 ಎಕರೆ ಭೂಮಿ ಮಾಡಲಿಕ್ಕೆ

ಬರುವುದಿಲ್ಲ, ಆರೋಗ್ಯ ಸರಿ ಇಲ್ಲವೆಂದು, ಆ ಕಾರಣದಿಂದ ಟ್ರಾನ್ಸ್‌ಫರ್ ಮಾಡಿದ್ದೇವೆಂದು ಹೇಳುತ್ತಿದ್ದಾರೆ. Is he capable to serve the state as a Cabinet minister? He himself admits that he is unfit to serve the State. 10 ಎಕರೆ ಭೂಮಿ ಮಾಡುವುದಕ್ಕೆ ಬರುವುದಿಲ್ಲ ಅವರು ಸಚಿವ ಸಂಪುಟದ ಸದಸ್ಯರಾಗಿ ಹೇಗೆ ಕೆಲಸ ಮಾಡುತ್ತಾರೆ? ಮನೆ ವ್ಯವಹಾರ, 10-15 ಎಕರೆ ಭೂಮಿ ಮಾಡಲಿಕ್ಕೆ ಆಗುವುದಿಲ್ಲ Is he capable of continuing as a Minister ? ನಾವು ಕ್ಲಿಯರ್ ಕಟ್ ಡಾಕ್ಯುಮೆಂಟ್ ಕೊಟ್ಟಿದ್ದೇವೆ ಡಿವಿಜನಲ್ ಕಮಿಷನರ್ ವರದಿ ಇದೆ. ಜಿಲ್ಲಾಧಿಕಾರಿಗಳ ವರದಿ ಇದೆ. ಇವರ ಮ್ಯಾನೇಜರ್ ರಿಪೋರ್ಟ್ ಕೊಟ್ಟಿದ್ದಾರೆ. ಹಣ ಕೊಡಬೇಕು ಎಂದು ಅವರ ಮ್ಯಾನೇಜರ್ ವಿರುದ್ಧ ಇದ್ದರೆ. I don't know. ರೆಕಾರ್ಡಿನಲ್ಲಿ ಇದೆ. ಇವರು ಹಣ ತುಂಬಬೇಕು, ಇವರು ಅಡ್ಡ ಬರುತ್ತಿದ್ದಾರೆ ವಸೂಲಿಗೆ ಅಡ್ಡ ಬರುತ್ತಿದ್ದಾರೆ. ಮ್ಯಾನೇಜರ್ ಜಾಯಿಂಟ್ ಹೆಸರಿನಲ್ಲಿ ಬರೆದ ಪತ್ರ ಇದೆ. ಆದಕಾರಣ ನಾನು ಮಾನ್ಯ ಮುಖ್ಯ ಮಂತ್ರಿಗಳಲ್ಲಿ ವಿನಂತಿ ಮಾಡುತ್ತಿದ್ದೇನೆ. ಯಾರೋ ಒಬ್ಬ ಹುಡುಗ ಏನೋ ಮಾಡಿದ ಏಂದರೆ, I am not going to gain anything personally.ತಾವು ಹೈ ಮಾರಲ್ಸ್ ಮಾತನಾಡುತ್ತೀರಿ; ಹೈ ಸ್ಟ್ಯಾಂಡರ್ಸ್, ಇನ್‌ಲೇಫ್ ಮಾತನಾಡುತ್ತೀರಿ ಅದೇ ರೀತಿ ತಾವು ನಡೆಯಲಿಕ್ಕೇನು ಪ್ರಯತ್ನ ಮಾಡುತ್ತಿದ್ದಿರಿ, ಆಗ ಇಂಥಹ ನಿಮ್ಮ ಸಹೋದ್ಯೋಗಿಗಳ ಬಗ್ಗೆ ನಮ್ಮ ಗಮನಕ್ಕೆ ಬಂದಾಗ, ನಾವು ನೋಟೀಸ್ ಕೊಟ್ಟು ಚರ್ಚೆ ಮಾಡಿ ಕ್ರಮ ತೆಗೆದುಕೊಳ್ಳಿ ಎಂದು ಹೇಳಿದರೆ ಯಾರೂ ನಂಬಲಿಕ್ಕೆ ಸಾಧ್ಯವಿಲ್ಲ. ವರದಿ ಬಂದು 2-3 ತಿಂಗಳಾಯಿತು; ತಕ್ಷಣ ಅವರನ್ನು ಡ್ರಾಪ್ ಮಾಡಬೇಕೆಂದು ತಮ್ಮಲಿ ಒತ್ತಾಯ ಮಾಡುತ್ತಿದ್ದೇನೆ.

ಶ್ರೀ ಕೆ. ಹೆಚ್ ರಂಗನಾಥ್:- ಮಾನ್ಯ ಸದಸ್ಯರು ಸದನದ ಮುಂದೆ ಅದನ್ನು ಹೇಳಿದಾಗ ಅದು ಸದನಕ್ಕೆ ಗೊತ್ತಾಯಿತು. It is now seized by the House.

* ಶ್ರೀ ವಿ. ವೀರಪ್ಪಮೊಯಿಲಿ ವಿರೋಧಪಕ್ಷದ ನಾಯಕರು ಬಹಳ ಗಹನವಾದಂಥ ಪ್ರಶ್ನೆಯನ್ನು ಎತ್ತಿದ್ದಾರೆ.

I don't want to shield anyone who has committed any irregularity, or malafides.ಈಗ ತಾವು ಹೇಳಿದ್ದೀರಿ. ಡಿಪಾರ್ಟ್‌ಮೆಂಟ್ ನವರು ವರದಿಯನ್ನು ನನಗೆ ಕಳುಹಿಸಿದ್ದಾರೆ.

I have received it. Don't think that I have not taken any action. I said, let the designated officers, if is a land Reforms violation Assistant Commissioner, if it is Urban Ceiling, Deputy commissioner - I have already asked them to take appropriate action under law. I have discharged my duties. Just because, it is connected with the Hon'ble Minister of my Cabinet, I am not

shielding. I have not kept the file. Immediately, my duty is to see that it is sent to the properly designated officer, who is the person who will ultimately decide the violation ? The designated officer under the law. So, I have referred it and he has to give his decision. Of course, I am dutybound to find another thing. Whether as a Minister, in my Cabinet, he has misused his office, to influence any officers form doing or omitting to do certain things. But all these transactions admittedly they have taken place when he was not a Minister. If the Hon'ble Minister has used his office to violate the law, to influence any person, then there is no doubt, I don't want to have such a Minister in my cabinet, I am making very clear. But the transactions have taken place little early. Now, the Hon'ble Minister, on the floor of the House has given a Statement. Whether that explanation is correct or not, it has to be scrutinised. It has to be scrutinised either by the designated officers or you may say that, who will scrutinise, when he is a Minister, whether he will be competent to scrutinise ? But the one question remains whether he is a Minister or a Member or any ordinary person. If he raises a genuine grievance, saying that neither the Deputy Commissioner nor the divisional Commissioner have sought my answer ; Natural justice seeks that everybody should get an opportunity including a Minister. Even a Minister cannot be hanged without conducting some enquiry. Just because he is a Minister, the Minister can be hanged without an enquiry and the ordinary person cannot be hanged without an enquiry, I don't think that you can discriminate law, or the natural justice will not operate differently on different individuals. This will operate equally on any other person. This question is raised by the Hon'ble Minister now.

I have to take notice of that. I am telling you only that. Suppose not taking notice of that, just by your version or his

version or the officers version, if I ask the resignation of the Hon'ble Minister, tomorrow the people will say that here is a Minister who has said that just to save Moily want to become a value-based politician and a Chief Minister and without giving an opportunity to the Hon'ble Minister, to explain things, if I start taking any action, tomorrow there are people on the other side who will say just because to keep up his image he has sacrificed a Minister, even without asking an explanation.

You will understand my position. So, I will have to ask the Hon'ble Minister to explain the circumstances and if there is any prima facie case that even as a Member he has misused his office and subsequently he has become a Minister, we want that particularly Ministers should be like "Ceaser's wife should be beyond suspicion." The principle will apply to the Ministers particularly. We must be more cautions than any ordinary person. As the Ministers, as M.L. As., we are the people who make law. If the people who want to make law, if they don't want to enforce it, and we try to circumvent the law, then the law will be utlimately a target, Justice will be ultimately a target So, this is the plain stand which I am going to take. I am going to write to the Hon'ble Minister, tomorrow itself, let the reply come. Then, what suitable action will have to be taken, you leave it to me.

* Sri R.V. Deshpande : The Hon'ble Chief Minister said that an opportunity should be given . Yes, an opportunity should be given. Nobody can be hanged without giving him an opportunity. But here, because there was a prima facie evidence, you suspended two Sub-Registrars. Why did you suspend two Sub-Registrars? What necessity was there.? When the Sub-Registrars registered the documents, you suspended them on the report of the Deputy Commissioner. You never gave them an opportunity. Why should you suspend them? You never

gave them an opportunity. You should have given them an opportunity. From an M.L.A. or a Minister, a Sub-Registrar cannot take money, as a consideration. If he does any help, he will do on his influence. So, you have made the Sub-Registrars as a scape-goats and the main culprit is out. Another point I would like to bring to your kind notice is that, when you have suspended two Sub-Registrars, the Hon'ble Minister Mr.Sandra said the suspension is wrong. He said the suspension is wrong. Now you say, "because there is a prima facie case, I have suspended two Sub-Registrars." The Minister's says the suspension is not correct. You don't give an opportunity to the Sub-Registrars. But because Mr. Sandra is your colleague and he is in the Government, you want to give him an opportunity. Now, against our friend Sri Revannaji, we made an allegation that a criminal case was pending against him which was filled in our regime. Then you should not have been that sensitive. Why did you drop him? Let me be very frank. He is also a capable person. He charged and you dropped him because of the criminal case. Again you inducted him, though there is a criminal case against him. But we did not say anything. When you could drop a person on the allegation of the leader of the Opposition, that a criminal case is pending, that too during the Janata Dal regime then he was not an MCA also; now in your own regime, in your own Government, own M.L.A., has committed so many blunders, committed breach of so many provisions, Land Reforms, Act, Land Revenue Act, Urban Ceiling Act, Stamps and Registration Act, and your Deputy Commissioner, Divisional Commissioner send a report,..

Sri K.H. Ranganath : Not as a Minister. Be fair.

Sri R.V. Deshpande : Alright. Not as a Minister. I never said as a Minister. But, for Minister or M.L.A., or citizen, as the

Hon'ble Chief Minister rightly said, the law is the same. I agree with him.

Sri B.H.Bannikod : Not as a Minister. ಶಾಸಕರಾಗಿ ತಪ್ಪು ಮಾಡಿದ್ದಕ್ಕೆ ಮಂತ್ರಿಯಾಗಿ ಪ್ರಮೋಷನ್ ಕೊಟ್ಟಹಾಗೆ ಕಾಣುತ್ತಾರೆ.

Sri R.V.Deshpande : He may be a common, man he may be an M.L.A., the law of the land will be the same. As the Chief Minister rightly said, the persons in positions will have to be more cautious. Because as M.L.A., he has done some breach of law, he cannot escape. He is more responsible than a common man. The common man can say, 'I am ignorant of law' though ignorance of law is no excuse. But still a common man can plead ignorance. But an M.L.A who has to make legislations here, cannot say 'I am ignorant of law'. So, clear clarity is there, clear reports are there. As you said on the other day, there are honest and dedicated officers. The Divisional Commissioner or the Deputy Commissioner are the officers with highest integrity. But now, if you say that " I would like to suspend Sub-Registrars only, and would like to give an opportunity to Mr. Sandra." I have no objection. But the people will feel otherwise; the people will judge you otherwise, because you have always been trying to preach simplicity and honesty. All these things you are preaching. You are trying to go in that path. If you say this, I think the people will mistake you; They will mistake your bonafides. So, I urge that in your own interest, you take action against the Hon'ble Minister.

* SRI M.Veerappas Moily : I have very plainly said in very simple terms; I have not hidden any fact. The very fact that my own officers have given a report can you see any interference in that report? No I am a Chief Minister here. He is a Minister here. Do you find any hand of interference in that report? No,Let us analyse the facts as truthful as possible. Otherwise, it was

available for you. " No, no, there is some violation, but your officers have twisted it, because you have interferred it." I have not interferred with it. Let the truth come out. don't want to obstruct the truth. Now, you said we have suspended two Sub-Registrars. Yes, it is a question of under - valuation. If there is prima facie case of under - valuation, the immediate thing is to keep the officers under suspension. That is our rule. That is what we do. The document may be pertaining to the Hon'ble Minister or at that time, the M.L.A., You know very well that there may be number of cases of under - valuation. belonging to some officers or belonging to some M.L.As., How do you connect the nexus of influence exercised by him. How do you say? There may be some property which is registered by for example you take Mr.Reddy. The Sub-Registrar may under value it. We suspend him. It does not mean that I asked you to suspend that M.L.A., That itself will not become a person ineligible to become a Minister. The very fact that we have ordered for an enquiry and ordered for suspension is again an evidence or our impartiality. That will be again an evidence of the transparency in the administration. But the question is what is the nexus? That I have to ask the Minister to explain to me. You allege, you charge, I would like to ask him and then, I have also to make some enquiry, I must make some discreet enquiry, whether there was any influence exercised by the then M.L.A., and now the Minister. But one thing, You will all agree, it is admitted, that no malafide, no abuse of office done as a Minister by Mr. Sandra. You agree that. But as a M.L.A., he has exercised this. But as far as the Co-operetive soceity is concerned, it was much before when he became M.L.A., So, if there is any nexus, after he became a Minister, I did not find any evidence to show that he has abused the office or authority or exercised his influence or

exercised his influence to scuttle the enquiry by the Divisional Commissioner or the Deputy Commissioner. I am telling you, you are opening up a pandora's box. Suppose , Mr Ramaiah, you or your children are entitled to purchase property. Some Sub-Registrar under - values it. Are you to leave your public office? Just imagine, you are opening up a Pandora's box. Unless there is a direct evidence to show that there is a nexus, we cannnot do anything we should not forget, all of us have children, all of us will have families, all of us have relatives. Tomorrow, a Sub-Registrar under values deliberately, then what happens?

ಶ್ರೀ ಸಿ.ಬೈರೇಗೌಡ : ಸಬ್ ರಿಜಿಸ್ಟ್ರಾರ್ ಅವರೇ ಅಂಡರ್ ವ್ಯಾಲ್ಯೂ ಮಾಡುವುದಿಲ್ಲ. ನಾವು ಏನು ಪತ್ರವನ್ನು ಕೊಡುತ್ತೇವೆ, ಅದನ್ನು ನಾವು ವ್ಯಾಲ್ಯೂ ಮಾಡತಕ್ಕಂಥಾದ್ದು.

Sri M.Veerappa Moily : You can invariably cannot infer the influence by any authority or any person for registering it for a value which is less than that. I am telling you the practical difficulties. So, the officer is responsible. I don't want any officer to under -value any property. We are going to take action. We have series of cases against number of Sub-Registrars. Here there is a direct evidence that he has undervalued. But anyway, I am asking the Hon'ble Minister to expalin all the circumstances. Let me see and let the report come.

ಶ್ರೀ ಬಿ.ಎಚ್. ಬನ್ನಿಕೋಡ್ : ನಾನು ಹೆಚ್ಚು ವಿವರಗಳಿಗೆ ಹೋಗುವುದಿಲ್ಲ. ಒಂದೇ ಒಂದು ವಿವರಣೆಯನ್ನು ಮುಖ್ಯಮಂತ್ರಿಗಳಿಗೆ ಕೇಳುತ್ತೇನೆ. ಇದು ಬಹಳ ಪ್ರಾಮುಖ್ಯವಾದುದು. ಇದರ ಬಗ್ಗೆ ಈಗಾಗಲೇ ಚರ್ಚೆಯಾಗಿದೆ. ಇದಕ್ಕೆ ಮಾನ್ಯ ಸಚಿವರು ಉತ್ತರ ಕೊಟ್ಟಿದ್ದಾರೆ ಮತ್ತು ಮಾನ್ಯ ಮುಖ್ಯ ಮಂತ್ರಿಗಳು ಉತ್ತರ ಕೊಡುತ್ತಾರೆ. ಇವೊತ್ತು ಸರ್ಕಾರದ ಮಂತ್ರಿಮಂಡಲದಲ್ಲಿ ಗೋಪಿನಾಥ ಸಾಂಡ್ಯಾರವರು ಇದ್ದಾರೆ. ಮಂತ್ರಿಮಂಡಲದ ಸಂಯುಕ್ತ ಜವಾಬ್ದಾರಿಯ ಪ್ರಶ್ನೆಯೂ ಇಲ್ಲಿ ಅಡಗಿದೆ. ಇವೊತ್ತು ಕಾರ್ಯಾಂಗದ ಅಧಿಕಾರಿಗಳಾದ ಒಬ್ಬ ತಹಶೀಲ್ದಾರದಿಂದ, ಅಸಿಸ್ಟೆಂಟ್ ಕಮೀಷನರ್‌ರವರಿಂದ, ಜಿಲ್ಲಾಧಿಕಾರಿಯಿಂದ ವಿಭಾಗಾಧಿಕಾರಿಗಳವರೆಗೆ ವರದಿಗಳನ್ನು ಕೊಟ್ಟಿದ್ದಾರೆ.

ಉಪಾಧ್ಯಕ್ಷರು : ಬನ್ನಿಕೋಡ್‌ರವರೇ, ಇದರ ಬಗ್ಗೆ ಈಗಾಗಲೇ ನಿಮ್ಮ ನಾಯಕರು ಪೂರ್ಣವಾಗಿ ಹೇಳಿದ್ದಾರೆ.

ಶ್ರೀ ಬಿ.ಹೆಚ್.ಬನ್ನಿಕೋಡ್ : ನಾನು ನನ್ನದೇ ಆದ ವಿವರಣೆ ಕೇಳುತ್ತೇನೆ. ಅದಕ್ಕೆ ತಾವು ಅವಕಾಶ ಮಾಡಿಕೊಡಬೇಕು. ವಿಭಾಗಾಧಿಕಾರಿಯವರಿಂದ ವರದಿಗಳು ಬಂದಿವೆ. ಈ ವರದಿಗಳ ಆಧಾರದ ಮೇಲೆ ಮಾನ್ಯ ಕಂದಾಯ ಸಚಿವರು ಸಂಬಂಧಪಟ್ಟ ಅಧಿಕಾರಿಗಳನ್ನು ಈಗಾಗಲೇ ಅಮಾನತ್ತಿನಲ್ಲಿಟ್ಟಿದ್ದಾರೆ. ಇವೊತ್ತು ಕಾರ್ಯಂಗದ ಜವಾಬ್ದಾರಿ ಹೊತ್ತಿರುವ ಮುಖ್ಯಮಂತ್ರಿಗಳು ಹಾಗೂ ಮಂತ್ರಿಗಳು ಅಧಿಕಾರಿಗಳು ಕೊಟ್ಟಂಥ ವರದಿಗೆ ವ್ಯತಿರಿಕ್ತವಾಗಿ ನಡೆದರೆ, ಕಂದಾಯ ಸಚಿವರು ತೆಗೆದುಕೊಂಡ ಕ್ರಮಕ್ಕೆ ಹೇಳಿಕೆಗೆ ವ್ಯತಿರಿಕ್ತವಾಗಿ ಅಧಿಕಾರಿಗಳನ್ನು ಅಮಾನತ್ತಿನಲ್ಲಿಟ್ಟಿದ್ದು ತಪ್ಪು ಎಂದು ಒಬ್ಬ ಸಹೋದ್ಯೋಗಿ ಮಂತ್ರಿಯ ಹೇಳಿಕೆಯಲ್ಲಿ ಖಂಡಿಸಿದೆ ಅಧಿಕಾರಿಗಳ ಕೊಟ್ಟ ವರದಿ ತಪ್ಪು ಸುಳ್ಳೆಂದು ಖಂಡಿಸಿದರೆ, ಇದಕ್ಕೆ ಸಂಯುಕ್ತ ಜವಾಬ್ದಾರಿ ಹೊತ್ತ ಸರ್ಕಾರವೆಂದು ಕರೆಯಬೇಕೇ? ಮಾನ್ಯ ಮುಖ್ಯಮಂತ್ರಿಗಳು ಹೇಳಿದರು : 'Cessar's wife must be above suspicion ಎಂದು ಬಹಳ ಚೆನ್ನಾಗಿ ಹೇಳಿದರು. ಅನಂತರ,all are equal before law ಎಂದು ನಾಣ್ಣುಡಿಗಳನ್ನು ಹೇಳಿ ಅದಕ್ಕೆ ತದ್ವಿರುದ್ಧವಾಗಿ ಸರ್ಕಾರ ನಡೆದುಕೊಳ್ಳುತ್ತಿದೆಯೆಂದು ನಾನು ಭಾವಿಸಿಲ್ಲ. ನೀವು ಹೇಳಿದ ಮಾತಿನಂತೆ ಅಧಿಕಾರದಲ್ಲಿರುವಾಗ ಎಲ್ಲರನ್ನೂ ಸಮಾನವಾಗಿ ಕಾಣತಕ್ಕಂಥ all are equal before law ಇದನ್ನು ಹೇಗೆ ಹೇಳುತ್ತಿದ್ದೀರೋ ಅದನ್ನು ನಿಮ್ಮ ಕಾರ್ಯಾಚರಣೆಯಲ್ಲಿ ಹಾಗೆಯೇ ಮಾಡಿ ತೋರಿಸಿದರೆ ಈ ನಾಡಿನ ಜನರು ನಿಮ್ಮನ್ನು ನಂಬಬಹುದೇ ವಿನಃ ಮಾಡಿದ ತಪ್ಪುಗಳನ್ನು ಮುಚ್ಚಲಿಕ್ಕೆ....

ಶ್ರೀ ಎಂ. ವೀರಪ್ಪ ಮೊಯಿಲಿ : ಇದನ್ನು ಯಾರು ಮುಚ್ಚಿದ್ದಾರೆ ಹೇಳಿ ? you tell me one instance where.. ಯಾವ ಒಂದು ಅಪರಾಧ ಮಾಡಿ ಅದನ್ನು ಮುಚ್ಚಿಡಲಾಗಿದೆಯೆಂದು ಹೇಳಿ? We have allowed the free process of law to take place. How do you say that?

ಶ್ರೀ ಬಿ.ಹೆಚ್. ಬನ್ನಿಕೋಡ್ : ಇದು ಒಂದು ಭಾಗ ಕಾರ್ಯಾಂಗದ ಉನ್ನತ ದಕ್ಷತೆಯಿಂದ ಸತ್ಯವನ್ನು ಹೊರಗೆ ತಂದಿದ್ದಾರೆ. ಅದನ್ನು ನಾವು ಒಪ್ಪುತ್ತಿದ್ದೇವೆ. ಕಾರ್ಯಾಂಗದ ಜವಾಬ್ದಾರಿ ಹೊತ್ತಿರುವ ಸಚಿವರು, ಮುಖ್ಯಮಂತ್ರಿಗಳು ತಮ್ಮ ಕಾರ್ಯಾಂಗದ ಉನ್ನತ ಅಧಿಕಾರಿಗಳೇ ಕೊಟ್ಟಂಥ ವರದಿಯನ್ನು ಮೇಲ್ನೊಟಕ್ಕೆ ಇವೊತ್ತು 'ಇಲ್ಲ' ಎಂದು ಹೇಳುವುದಾದ್ದರೆ, ಸಚಿವ ಸಂಪುಟದ ಜಂಟಿ ಜವಾಬ್ದಾರಿ ಹೊತ್ತ ಮಂತ್ರಿಗಳು ತಮ್ಮದೇ ಸರ್ಕಾರದ ಕ್ರಮವನ್ನು ಗಾಳಿಗೆ ತೂರಿ ಬಿಡುತ್ತಾರೆಂದರೆ ಅವರನ್ನು ವಜಾಗೊಳಿಸುವುದು ಅನಿವಾರ್ಯ. ಇಲ್ಲದೆ ಹೋದರೆ ಮುಖ್ಯಮಂತ್ರಿಗಳು ಹೇಳುವುದೆಲ್ಲಾ ಒಳ್ಳೆಯದು, ಮಾಡುವುದೆಲ್ಲಾ ಹಿತ್ತಲ ಬಾಗಿಲ ಕೆಲಸವೆಂದು ಜನರು ಆಡಿಕೊಳ್ಳಬೇಕಾಗುತ್ತದೆ. ದಯವಿಟ್ಟು ಅದಕ್ಕೆ ಅವಕಾಶ ಕೊಡಬೇಡಿ.

ಶ್ರೀ ಆರ್.ವಿ. ದೇಶಪಾಂಡೆ : ಮಾನ್ಯ ಮುಖ್ಯಮಂತ್ರಿಗಳು ಸಬ್‌ರಿಜಿಸ್ಟ್ರಾರ್ ಬಗ್ಗೆ ಮಾತನಾಡುತ್ತಾ ಅವರ ನೆಕ್ಸಸ್ ಅನ್ನು ನೋಡಬೇಕೆಂದು ಹೇಳಿದ್ದಾರೆ. ಈಗ ಇದರ ಬಗ್ಗೆ ಹೆಚ್ಚು ಚರ್ಚೆ ಮಾಡುವುದಕ್ಕೆ ಹೋಗುವುದಿಲ್ಲ. ಇವೊತ್ತು ಸಬ್ ರಿಜಿಸ್ಟ್ರಾರ್ ಮೇಲೆ ಮುಖ್ಯಮಂತ್ರಿಯವರು

ದೂರಿದ್ದಾರೆ. ಒಬ್ಬ ಸಬ್ ರಿಜಿಸ್ಟ್ರಾರ್ ಅಂಡ್‌ರ್ ವ್ಯಾಲ್ಯುಯೇಷನ್ ಮಾಡಬೇಕಾದರೆ ಅದಕ್ಕೆ ಎರಡು ಕನ್ಸಿಡರೇಷನ್ ಇರಬೇಕು ಹಣ ಅಥವಾ ಪ್ರಭಾವ.....

ಶ್ರೀ ಎಂ.ವೀರಪ್ಪ ಮೊಯಿಲಿ : ತಾವು ಹೇಳಿದ್ದೇ ಹೇಳುತ್ತಿದ್ದೀರಲ್ಲಾ.

ಶ್ರೀ ಆರ್. ವಿ.. ದೇಶಪಾಂಡೆ : ನಾವು ಹೇಳಿದ ವಿಚಾರ ತಮ್ಮ ತಲೆಗೆ ಹೋಗಿಲ್ಲವೆಂದರೆ ಪುನಃ ಹೇಳಬೇಕಾಗುತ್ತದೆ. ಗೋಪಿನಾಥ ಸಾಂಡ್ರಾರವರು ಸಬ್ ರಿಜಿಸ್ಟ್ರಾರ್‌ಗೆ ಹಣ ಕೊಡುವುದಕ್ಕೆ ಸಾಧ್ಯವಿಲ್ಲವೇ ? Suppose he says that he has paid the money then it is another offence. The only case available is influence. Otherwise, the Sub-Registrar can not yield.ಈಗ ಅದರ ಬಗ್ಗೆ ಹೆಚ್ಚು ಚರ್ಚೆ ಮಾಡಿದರೂ ವೀರಪ್ಪ ಮೊಯಿಲಿಯವರು ಒಪ್ಪಿಕೊಳ್ಳುವುದಿಲ್ಲವೆಂಬುದು ನನಗೆ ಗೊತ್ತಿದೆ. I leave it to the colleagues of Sri Veerappa Moiliji Hon'ble Ranganathji, Hon'ble Kagodu Thimmaji, if what the Hon'ble Chief Minister has said if it has convinced them, it will convince me. I think the argument of the Hon'ble Chief Minister is not from his heart. It is not from his heart. ಈಗ ಅದರ ಬಗ್ಗೆ ಹೆಚ್ಚು ಮಾಡಿದರೂ ವೀರಪ್ಪ ಮೊಯಿಲಿಯವರು ಒಪ್ಪಿಕೊಳ್ಳುವುದಿಲ್ಲವೆಂಬುದು ನನಗೆ ಗೊತ್ತಿದೆ.

ಶ್ರೀ ಎಂ.ವೀರಪ್ಪ ಮೊಯಿಲಿ : ಈಗ ಇಷ್ಟೆಲ್ಲಾ ಏಕೆ ಮಾತನಾಡುತ್ತಿದ್ದೀರಿ? ನಾನು ಸ್ಪಷ್ಟವಾಗಿ ಹೇಳಿದ್ದೇನೆ. The Minister has raised it and he said very specifically that at the time of this report, he was not given an opportunity. When you have raised it on the floor of the House, do you want me to punish him without giving him opportunity ?

Is it that Mr.Deshapande should do it? Is it right? Whether Mr. Deshpande can do it? For a while, if I wanted to defend this transcation in relation to under valuation, I would have found some way to defend that Sub - Registrar also. I have not done it. I said , let the law take its own course. This is what I have done.

ಆದುದರಿಂದ ಇವತ್ತು ಅವರ ಹತ್ತಿರ ಕೇಳುವುದು ಏನೂ ಇಲ್ಲ, ಏನೂ ಬೇಡ ಎಂದರೆ then I have to request him, " just because Mr. Deshpande

demands your resignation, please give your resignation". Do you want to do that?

Sri R.V.Deshapande : No. You have no faith in your own officers who are with highest integrity. The Hon'ble Chief Minister said that there was no influence done by the District Minister. He was not capable of doing it because the officers are so honest. The Deputy Commissioner Agwane, the Divisional Commissioner Mr.Hajra or our Revenue Commissioner are so honest officers. Nor I, nor you, can influence them. They are officers of that integrity. There is no chance for Mr. Sandra or anybody to influence them. Because of that, that report has come. Other wise, the report would have been something different. I complement the officers that they have shown the courage.

Sri .M.Veerappa Moily : When you have complimented my officers, you have complemented me. Thank you very much.

Sri R.V.Deshapande : I have complemented you to the extent that you did not interfere till the report came. But after the report, you should have acted...

Sri M.Veerappa MOILY : I have taken action.

Sri R.V.Deshapande : Sir, we are not convinced.

ಶ್ರೀ ಎಂ.ವೀರಪ್ಪಮೊಯಿಲಿ : ನಿಮ್ಮ ಉದ್ದೇಶ ಬೇರೆ.

Sri R.V.Deshapande : We are not convinced. The Hon'ble Chief Minister is purposely shielding the Minister who has thwarted so many legislations of this land and the person who is not capable to continue in the Cabinet. So, we have no other alternative, but to protest and walk out.

ಶ್ರೀ ಬಿ.ಹೆಚ್ ಬನ್ನಿಕೊಡ್ :- ಈ ರೀತಿ ಮಾಡಿದರೆ ಯಾವ ಅಧಿಕಾರಿಗಳೂ ಕೆಲಸ ಮಾಡುವುದಿಲ್ಲ .

ಶ್ರೀ ಎಂ.ವೀರಪ್ಪಮೊಯಿಲಿ : ಅದರ ಅವಶ್ಯಕತೆ ಇಲ್ಲ.

(Interruptions)

(ಶ್ರೀ ಆರ್.ವಿ.ದೇಶಪಾಂಡೆಯವರು ಮತ್ತು ಜನತಾದಳದ ಶಾಸಕರು ಸಭ್ಯಾತ್ಯಾಗ ಮಾಡಿದರು)

ಉಪಾಧ್ಯಕ್ಷರು :- ವಿರೋಧಪಕ್ಷದ ನಾಯಕರ ನೋಟಿಸ್‌ಗೆ ಸಂಬಂಧಪಟ್ಟಂತಹ ಸಚಿವರು ದೀರ್ಘವಾದ ಉತ್ತರ ಕೊಟ್ಟಿದ್ದಾರೆ. ಅದಕ್ಕೆ ಪೂರಕವಾಗಿ ಮಾನ್ಯ ಮುಖ್ಯಮಂತ್ರಿಯವರು ಸಮಂಜಸವಾಗಿ ಉತ್ತರ ಕೊಟ್ಟಿರುವುದರಿಂದ ಈ ಚರ್ಚೆಯನ್ನು ಮುಕ್ತಾಯಗೊಳಿಸಿ, ಈಗ ಕರ್ನಾಟಕ ನಗರ ಪ್ರದೇಶಗಳಲ್ಲಿ ಅನಧಿಕೃತ ನಿರ್ಮಾಣಗಳನ್ನು ಸಕ್ರಮಗೊಳಿಸುವ ವಿಧೇಯಕವನ್ನು ನಗರಾಭಿವೃದ್ಧಿ ಮತ್ತು ವಕ್ಫ್ ಮಂತ್ರಿಗಳು ಮಂಡಿಸುವುದು.

ಶಾಸನ ರಚನಾಕೂಟ

1994 ರ ಕರ್ನಾಟಕ ನಗರ ಪ್ರದೇಶಗಳಲ್ಲಿ ಅನಧಿಕೃತ ನಿರ್ಮಾಣಗಳನ್ನು ಸಕ್ರಮಗೊಳಿಸುವ (ತಿದ್ದುಪಡಿ) ವಿಧೇಯಕ

ಪರ್ಯಾಲೋಚನಾ ಪ್ರಸ್ತಾವ

ಶ್ರೀ ಸಿ.ಆರ್. ಸಗೀರ್ ಅಹಮದ್ (ನಗರಾಭಿವೃದ್ಧಿ ಮತ್ತು ವಕ್ಫ್ ಮಂತ್ರಿಗಳು) : - ಮಾನ್ಯ ಅಧ್ಯಕ್ಷರೆ, 1994 ರ ಕರ್ನಾಟಕ ನಗರ ಪ್ರದೇಶಗಳಲ್ಲಿ ಅನಧಿಕೃತ ನಿರ್ಮಾಣಗಳನ್ನು ಸಕ್ರಮಗೊಳಿಸುವ (ತಿದ್ದುಪಡಿ) ವಿಧೇಯಕವನ್ನು ಪರ್ಯಾಲೋಚಿಸಬೇಕೆಂದು ಕೋರುತ್ತೇನೆ.

ಪ್ರಸ್ತಾಪವನ್ನು ಮಂಡಿಸಲಾಯಿತು

ಶ್ರೀ ಸಿ.ಬೈರೇಗೌಡ :- ಮಾನ್ಯ ಉಪಾಧ್ಯಕ್ಷರೇ, ದಯಮಾಡಿ ಏನು ಒಂದು ಸಂಪ್ರದಾಯವನ್ನು ನಾವು ಇಲ್ಲಿ ಅನುಸರಿಸಿಕೊಂಡು ಬಂದಿದ್ದೇವೆ, ಅದರಂತೆ ಮಾನ್ಯ ಮಂತ್ರಿಗಳು ಈ ತಿದ್ದುಪಡಿ ಬಿಲ್ ಬಗ್ಗೆ ವಿವರಣೆ ಕೊಡಲಿ.

ಉಪಾಧ್ಯಕ್ಷರು : ಅವರು ಹೇಳುತ್ತಾರೆ ತಾವು ಕುಳಿತುಕೊಳ್ಳಿ. ವಾಕ್ ಔಟ್ ಹೋಗಿ, ಈಗ ಒಂದು ಸಂಪ್ರದಾಯ ಎಂದು ಹೇಳುತ್ತೀರಿ. ಇನ್ನು ಏನು ಹೇಳುವುದು? ಮಂತ್ರಿಗಳೇ ಹೇಳಿ...

ಶ್ರೀ ಸಿ.ಆರ್. ಸಗೀರ್ ಅಹಮದ್ (ನಗರಾಭಿವೃದ್ಧಿ ಮತ್ತು ವಕ್ಫ್ ಸಚಿವರು):- ಮಾನ್ಯ ಉಪಾಧ್ಯಕ್ಷರೇ, ನಗರ ಪ್ರದೇಶಗಳಲ್ಲಿನಿರ್ಮಾಣ ವಾದಂತಹ ಮನೆಗಳನ್ನು ಸಕ್ರಮಗೊಳಿಸುವುದಕ್ಕಾಗಿ,, ಈ ವಿಧೇಯಕವನ್ನು ಈ ಸಭೆಯಲ್ಲಿ ಮಂಡಿಸಿದ್ದೇನೆ. ಈ ಒಂದು ವಿಧೇಯ 1991ನೇ ಇಸವಿಯವರೆಗೆ ಜಾರಿಯಲ್ಲಿದ್ದು ಇನ್ನು ಮುಂದೆ 1-8-94ರವರೆಗೆ ಅದರ ಅವಧಿಯನ್ನು ವಿಸ್ತರಿಸಿ, ಈ ಅನಧಿಕೃತವಾಗಿ ನಿರ್ಮಾಣವಾದಂತಹ ಮನೆಗಳ ಜನರು ಅರ್ಜಿಗಳನ್ನು ಕೊಡುವುದಕ್ಕಾಗಿ ಸಮಯವನ್ನು ವಿಸ್ತರಿಸಬೇಕೆಂದು ನಾವು ಈ ಮಸೂದೆಯನ್ನು ತಂದಿದ್ದೇವೆ. ದಿನಾಂಕ 30-9-94ರವರೆಗೆ ಈ ಸಮಯವನ್ನು ವಿಸ್ತರಿಸಬೇಕೆಂದು ನಾವು